ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ

**ಪಶುವೈದ್ಯಕೀಯ ಮಹಾವಿದ್ಯಾಲಯ**

ವಿನೋಬನಗರ, ಅಂಚೆ ಪೆಟ್ಟಿಗೆ ಸಂಖ್ಯೆ–53, ಶಿವಮೊಗ್ಗ – 577 204

**ಡೀನ್ ರವರ ಕಛೇರಿ** | E-mail: vcsdean@gmail.com | Website : www.kvafsu.edu.in | **ದೂರವಾಣಿ ಸಂಖ್ಯೆ:** 08182-200872

ಸಂ.ಡೀನ್/ಪವೈಮ–ಶಿ/ಬೋಧಕ(ಗುತ್ತಿಗೆ ಆಧಾರ)ನೇಮಕಾತಿ/2026–2027/281 ದಿನಾಂಕ: 22.06.2026

## ಅಧಿಸೂಚನೆ

**ವಿಷಯ:** ಗುತ್ತಿಗೆ ಆಧಾರದ ಮೇಲೆ ಬೋಧಕ ಸಿಬ್ಬಂದಿಗಳ ನೇಮಕಾತಿ – ಕುರಿತು

**ಉಲ್ಲೇಖ:** 1. ಸಂಖ್ಯೆ: ಕುಸ:ಕಪಪಮೀವಿವಿ:ನೇ.ವಿ.ಸ.ಪ್ರಾ:ಗುತ್ತಿಗೆ:2026-27, ದಿನಾಂಕ: 13.06.2026.
2. No.R/Establishment/Temp Assistant Prof/2O26-27, Date: 18.06.2026

*****

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಶಿವಮೊಗ್ಗ ಪಶುವೈದ್ಯಕೀಯ ಮಹಾವಿದ್ಯಾಲಯದ ಕೆಳಗೆ ನಮೂದಿಸಿದಂತೆ ವಿವಿಧ ವಿಭಾಗಗಳಲ್ಲಿ ಸಹಾಯಕ ಪ್ರಾಧ್ಯಾಪಕರ ಖಾಲಿ ಇರುವ ಹುದ್ದೆಗಳ ಎದುರಾಗಿ ಬೋಧಕ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ನೇಮಕಾತಿ ಬಯಸುವ ಅಭ್ಯರ್ಥಿಗಳು ದಿನಾಂಕ: 04.07.2026 ರಂದು ಬೆಳಿಗ್ಗೆ 10.30 ಘಂಟೆಗೆ ನಿಗದಿಯಾಗಿರುವ ಸಂದರ್ಶನಕ್ಕೆ ಹಾಜರಾಗಬಹುದಾಗಿದೆ. ಮುಂದುವರೆದು, ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಸ್ವ-ವಿವರವನ್ನು ಭರ್ತಿ ದಿನಾಂಕ: 04.07.2026 ರ ಬೆಳಿಗ್ಗೆ 09.30 ಗಂಟೆಗೆ ತಮ್ಮ ಹೆಸರನ್ನು ಮಹಾವಿದ್ಯಾಲಯದ ಕಛೇರಿಯಲ್ಲಿ ನೊಂದಾಯಿಸತಕ್ಕದ್ದು.

| ಕ್ರ. ಸಂ. | ಹುದ್ದೆ ಮತ್ತು ವಿಭಾಗದ ಹೆಸರು | ಹುದ್ದೆಗಳ ಸಂಖ್ಯೆ |
|---|---|---|
| 1. | ಪಶುವೈದ್ಯಕೀಯ ಅಂಗರಚನಾ ಶಾಸ್ತ್ರ ವಿಭಾಗ (Veterinary Anatomy) | 01 |
| 2. | ಪ್ರಾಣಿ ಆಹಾರ ಶಾಸ್ತ್ರ (Animal Nutrition) | 01 |
| 3. | ಪಶುವೈದ್ಯಕೀಯ ಔಷಧ ಮತ್ತು ವಿಷ ಶಾಸ್ತ್ರ ವಿಭಾಗ (Veterinary Pharmacology and Toxicology) | 01 |
| 4. | ಪಶುವೈದ್ಯಕೀಯ ರೋಗ ಶಾಸ್ತ್ರ ವಿಭಾಗ (Veterinary Pathology) | 01 |
| 5. | ಪಶುವೈದ್ಯಕೀಯ ಪರೋಪಜೀವಿ ಶಾಸ್ತ್ರ ವಿಭಾಗ (Veterinary Parasitology) | 01 |
| 6. | ಜಾನುವಾರು ಸಾಕಾಣಿಕ ಸಂಕೀರ್ಣ ವಿಭಾಗ (Livestock Farm Complex (Poultry/LPM) | 01 |
| 7. | ಪಶುವೈದ್ಯಕೀಯ ಶರೀರಕ್ರಿಯಾ ಮತ್ತು ಜೀವರಸಾಯನ ಶಾಸ್ತ್ರ ವಿಭಾಗ (Veterinary Physiology and Biochemistry) | 01 |
| 8. | ಪಶುವೈದ್ಯಕೀಯ ಸ್ತ್ರೀರೋಗ ಮತ್ತು ಪ್ರಸೂತಿ ಶಾಸ್ತ್ರ ವಿಭಾಗ (Veterinary Gynaecology and Obstetrics) | 01 |
| 9. | **ಪಶುವೈದ್ಯಕೀಯ ಚಿಕಿತ್ಸಾ ಸಂಕೀರ್ಣ ಶಾಸ್ತ್ರ ವಿಭಾಗ** | |
| | a) ಪಶುವೈದ್ಯಕೀಯ ಶಸ್ತ್ರ ಚಿಕಿತ್ಸೆ ಮತ್ತು ಕ್ಷ-ಕಿರಣ ಶಾಸ್ತ್ರ (Veterinary Surgery and Radiology) | 01 |
| | b) ಪಶುವೈದ್ಯಕೀಯ ಚಿಕಿತ್ಸಾ ಶಾಸ್ತ್ರ (Veterinary Medicine) | 02 |
| | ಒಟ್ಟು | 11 |

ವಿದ್ಯಾರ್ಹತೆ :

- ಸಂಬಂಧಪಟ್ಟ ವಿಷಯದಲ್ಲಿ ಭಾರತೀಯ ಪಶುವೈದ್ಯಕೀಯ ಪರಿಷತ್ತಿನಿಂದ ಮಾನ್ಯತೆ ಹೊಂದಿರುವ ಮಹಾವಿದ್ಯಾಲಯಗಳಿಂದ ಪಶುವೈದ್ಯಕೀಯ ಅಥವಾ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಅಡಿಯಲ್ಲಿ ಬರುವ deemed institutions ಗಳಿಂದ ದಿನಾಂಕ: 04–07–2026 ರೊಳಗೆ ಪದವಿ ಪಡೆದಿರಬೇಕು.
- ಪಶುವೈದ್ಯಕೀಯ ವಿಷಯಕ್ಕೆ ಸಂಬಂಧಿಸಿದ ಅಭ್ಯರ್ಥಿಗಳು ಕೆ.ವಿ..ಸಿ ಖಾಯಿದೆ 1984 ರ ಅಡಿಯಲ್ಲಿ ಕಡ್ಡಾಯವಾಗಿ ನೊಂದಣಿಯಾಗಿರಬೇಕು.
- ರಾಷ್ಟ್ರೀಯ ಅರ್ಹತಾ ಪರೀಕ್ಷೆ (NET) ಯಲ್ಲಿ ಕಡ್ಡಾಯವಾಗಿ ಉತ್ತೀರ್ಣರಾಗಿರಬೇಕು.

ಮು.ಪು.ನೋ.

ಷರತ್ತು ಮತ್ತು ನಿಬಂಧನೆಗಳು:

- ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವ ಬೋಧಕ ಸಿಬ್ಬಂದಿಗೆ ಮಾಸಿಕ ರೂ. 50,000/- ವೇತನವಾಗಿ ಪಾವತಿಸಲಾಗುವುದು
- ನೇಮಕಾತಿಯ ಅವಧಿಯು ದಿನಾಂಕ: 16-05-2027 ರವರೆಗೆ ಅಥವಾ ಸದರಿ ಹುದ್ದೆ ಖಾಯಂ ಅಭ್ಯರ್ಥಿಯಿಂದ ಭರ್ತಿ ಆಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಸ್ತಿತ್ವದಲ್ಲಿರುತ್ತದೆ
- ಕನ್ನಡ ಭಾಷಾ ಜ್ಞಾನ ಕಡ್ಡಾಯ
- ಗುತ್ತಿಗೆ ಆಧಾರದ ನೇಮಕಾತಿಯು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು, ಯಾವುದೇ ಸಂದರ್ಭದಲ್ಲಿ ಖಾಯಂಗೊಳಿಸಲು ಅವಕಾಶವಿರುವುದಿಲ್ಲ.
- ಗುತ್ತಿಗೆ ಆಧಾರದ ಮೇಲೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಕರ್ನಾಟಕದಲ್ಲಿ ವಾಸವಾಗಿರಬೇಕು.
- ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಸಹಾಯಕ ಪ್ರಾಧ್ಯಾಪಕರಿಗೆ ನಿಗದಿಪಡಿಸಿರುವ ಮಾಸಿಕ ವೇತನವನ್ನು ಹೊರತುಪಡಿಸಿ ಇತರೆ ಯಾವುದೇ ಭತ್ಯೆಗಳನ್ನು ನೀಡಲಾಗುವುದಿಲ್ಲ
- ಗುತ್ತಿಗೆ ಮೇರೆಗೆ ಆಯ್ಕೆಯಾಗುವ ಸಹಾಯಕ ಪ್ರಾಧ್ಯಾಪಕರಿಗೆ ಸ್ಥಳ ನಿಯುಕ್ತಿಗೊಳಿಸುವ ಸ್ಥಳದಲ್ಲಿಯೇ ಕಡ್ಡಾಯವಾಗಿ ಕರ್ತವ್ಯ ನಿರ್ವಹಿಸತಕ್ಕದ್ದು.
- ಗುತ್ತಿಗೆ ಮೇರೆಗೆ ನೇಮಕವಾದ ಅಭ್ಯರ್ಥಿಯು ಮಧ್ಯದಲ್ಲಿ ಸೇವೆಯನ್ನು ತ್ಯಜಿಸಲು ಇಚ್ಛಿಸಿದಲ್ಲಿ ಒಂದು ತಿಂಗಳ ಮುಂಚಿತವಾಗಿ ಮೇಲಾಧಿಕಾರಿಗಳ ಮುಖಾಂತರ ವಿಶ್ವವಿದ್ಯಾಲಯಕ್ಕೆ ಮನವಿಸಲ್ಲಿಸುವುದು.
- ಗುತ್ತಿಗೆ ಮೇರೆಗೆ ನೇಮಕವಾದ ಅಭ್ಯರ್ಥಿಯು ಯಾವುದೆ ಮಾಹಿತಿ ನೀಡದೇ ಕರ್ತವ್ಯಕ್ಕೆ ಗೈರುಹಾಜರಾದಲ್ಲಿ ಕನಿಷ್ಠ ಒಂದು ತಿಂಗಳ ವೇತನವನ್ನು ವಿಶ್ವವಿದ್ಯಾಲಯಕ್ಕೆ ಹಿದಿರುಗಿಸತಕ್ಕದ್ದು.
- ಸಕ್ಷಮ ಪ್ರಾಧಿಕಾರದ ಅನುಮತಿ ಪಡಡೆಯದೆ ವೈದ್ಯಕೀಯ ಕಾರಣಗಳ ಮೇರೆಗಾಗಲಿ ಅಥವಾ ಬೇರೆ ಕಾರಣಗಳಿಂದಾಗಲೀ ಅನಧಿಕೃತ ಗೈರು ಹಾಜರಿಯಾದಲ್ಲಿ ಇವರುಗಳ ಗುತ್ತಿಗೆ ಆಧಾರದ ನೇಮಕಾತಿ ಸೇವೆಯನ್ನು ರದ್ದುಗೊಳಿಸಲಾಗುವುದು.
- ಗುತ್ತಿಗೆ ಆಧಾರದ ಮೇರೆಗೆ ಆಯ್ಕೆಯಾದ ಸದರಿ ಬೋಧಕ ಸಿಬ್ಬಂದಿಗಳ ದುರ್ನಡತೆ, ನಿರ್ಲಕ್ಷತೆಯಿಂದ ವಿಶ್ವವಿದ್ಯಾಲಯಕ್ಕೆ ಸಂಬಂಭವಿಸಬಹುದಾದ ಎಲ್ಲಾ ನಷ್ಟಗಳನ್ನು ವಿಶ್ವಿದ್ಯಾಲಯಕ್ಕೆ ಸದರಿ ಬೋಧಕ ಸಿಬ್ಬಂದಿರವರು ಭರಿಸಬೇಕಾಗುತ್ತದೆ.
- ಗುತ್ತಿಗೆ ಆಧಾರಿತ ಬೋಧಕ ಸಿಬ್ಬಂದಿಯವರು ತಮ್ಮ ಕರ್ತವ್ಯವನ್ನು ಪಾಲಿಸುತ್ತಿರುವಾಗ ಅಥವಾ ನೆರವೇರಿಸುತ್ತಿರುವಾಗ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
- ಗುತ್ತಿಗೆ ಆಧಾರದ ಮೇಲೆ ಆಯ್ಕೆ ಹೊಂದಿರುವ ಬೋಧಕ ಸಿಬ್ಬಂದಿರವರು ರೂ. 100/- ಛಾಪಾ ಕಾಗದದ ನಿಗದಿತ ನಮೂನೆಯ ಮುಚ್ಚಳಿಕೆ ಪತ್ರ ಸಂಭಂದಿತ ಅಧಿಕಾರಿರವರಿಗೆ ಸಲ್ಲಿಸತಕ್ಕದ್ದು.
- ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗೆ ಯಾವುದೇ ಪ್ರಯಾಣ ಭತ್ಯೆ (TA/DA) ನೀಡಲಾಗುವುದಿಲ್ಲ

22/6/20

ಡೀನ್ (ಪ.ವೈ.)

ಡೀನ್ (ಪಶುವೈದ್ಯಕೀಯ)
ಪಶುವೈದ್ಯಕೀಯ ಮಹಾವಿದ್ಯಾಲಯ
ವಿನೋಬನಗರ, ಶಿವಮೊಗ್ಗ-577 204.

ಪ್ರತಿಯನ್ನು ಆದರ ಪೂರ್ವಕವಾಗಿ ಸಲ್ಲಿಸಲಾಗಿದೆ:

1. ಮಾನ್ಯ ಕುಲಸಚಿವರು, ಕಪಪಮೀವಿವಿ, ಬೀದರ ಇವರ ಮಾಹಿತಿಗಾಗಿ
2. ಮಾನ್ಯ ಹಣಕಾಸು ನಿಯಂತ್ರಣಾಧಿಕಾರಿಗಳು, ಕಪಪಮೀವಿವಿ, ಬೀದರ ಇವರ ಮಾಹಿತಿಗಾಗಿ
3. ವಿಶ್ವವಿದ್ಯಾಲಯ ಗ್ರಂಥಪಾಲಕರು, ಕಪಪಮೀವಿವಿ, ಬೀದರ ರವರಿಗೆ ಸದರಿ ಅಧಿಸೂಚನೆಯನ್ನು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಲು ಕೋರಲಾಗಿದೆ
4. ಡೀನ್, ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು/ಬೀದರ/ಹಾಸನ/ಗದಗ ಮಾಹಿತಿಗಾಗಿ ಮತ್ತು ತಮ್ಮ ಮಹಾವಿದ್ಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಲು ಕೋರಲಾಗಿದೆ
5. ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಶಿವಮೊಗ್ಗ ರವರಿಗೆ ಸದರಿ ಅಧಿಸೂಚನೆ ಬಗ್ಗೆ ದಿನ ಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರ ನೀಡುವಂತೆ ಕೋರಲಾಗಿದೆ
6. ಹಿರಿಯ ಆಪ್ತ ಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳ ಕಛೇರಿ ರವರಿಗೆ ಸದರಿ ಮಾಹಿತಿಯನ್ನು ಮಾನ್ಯ ಕುಲಪತಿಗಳು, ಕ.ಪ.ಪ.ಮೀ.ವಿ.ವಿ., ಬೀದರ ರವರ ಗಮನಕ್ಕೆ ತರಲು ಕೋರಲಾಗಿದೆ.

ಪ್ರತಿ:

1. ಮಹಾವಿದ್ಯಾಲಯದ ಸೂಚನಾ ಫಲಕಗಳು
2. ಕಛೇರಿ ಕಡತ